**ಅಧ್ಯಾಯ ೧**

## ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಮಿತಿಗಳು

## ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಮಿತಿಗಳು

ಹೊಸಗನ್ನಡ ಸಾಹಿತ್ಯದಲ್ಲಿ ಶಿಷ್ಟವಾಗಿ ಕಾಣಿಸಿಕೊಂಡ ಕಥನಕವನ ಪ್ರಕಾರವು ಕಥೆ ಹೇಳುವ ಮತ್ತು ಕೇಳುವ ಪರಂಪರೆಯಾದ ಜನಪದ ಸಾಹಿತ್ಯ ಲೋಕದ ಕೊಡುಗೆಯಾಗಿದೆ. ಈ ಕಥೆ ಹೇಳುವ ಮತ್ತು ಕೇಳುವ ಜನಪದ ಲೋಕದ ಕಲೆಯು ಪದ್ಯ ರೀತಿಯಲ್ಲಿ ಹೊರಹೊಮ್ಮಿದ ರೂಪವಿದು. ಪ್ರಪಂಚದ ಎಲ್ಲಾ ಭಾಷೆಗಳಲ್ಲೂ ಕಾವ್ಯಮಯವಾಗಿ ಕಥೆಯನ್ನು ಹೇಳುವ ಕ್ರಿಯೆ ಒಂದು ಪ್ರವೃತ್ತಿಯಾಗಿಯೇ ಬೆಳೆದು ಬಂದಿದೆ. ಕಥನಕವನಗಳು ತಮ್ಮ ಆರಂಭಿಕ ಹಂತದಲ್ಲಿ ಮನೋರಂಜನೆ, ನೀತಿ ಕಥೆ ಸಿದ್ಧಾಂತಗಳ ಉದ್ದೇಶವನ್ನು ಮೈಗೂಡಿಸಿಕೊಂಡಿದ್ದವು. ಆದರೆ ನಿಧಾನವಾಗಿ ಈ ಅಂಶಗಳನ್ನು ಕಳಚಿಕೊಳ್ಳುತ್ತ ಸಮಕಾಲೀನ ವೈಚಾರಿಕತೆಯನ್ನು ಮೈಗೂಡಿಸಿಕೊಂಡಿತು. ಹೀಗಿದ್ದಾಗಲೂ 'ಕಥನಾಂಶ'ವಾಗಿ ಹೇಳಬೇಕಾದುದನ್ನು ಅಭಿವ್ಯಕ್ತಿಸುವುದು ಇದರ ಜೀವಾಳವಾಗಿದೆ.

ಕಥನಕವನ ಪ್ರಕಾರವೂ ನವೋದಯ ಪ್ರಾರಂಭದಿಂದಲೂ ಇಂದಿನವರೆಗೂ ವೈವಿಧ್ಯಮಯ ಕಥೆ, ವಸ್ತು ವಿಚಾರಗಳನ್ನೊಳಗೊಂಡು ವೈವಿಧ್ಯಮಯ ರೂಪದಲ್ಲಿ ಮೂಡಿ ಬರುತಲಿದೆ. ಕಥನಾಂಶಕ್ಕೆ ದೊರೆತ ಪ್ರಾಧಾನ್ಯತೆ ವರ್ತಮಾನದ ವೈಚಾರಿಕ ಅಗತ್ಯಗಳ ನಡುವೆ ಏರುಪೇರಾಗಿರುವುದು ಸತ್ಯ. ತಮ್ಮ ವೈವಿಧ್ಯತೆಗೆ ಹೆಸರಾದಂತೆ ಅವುಗಳ ಅಧ್ಯಯನವು ಕುತೂಹಲಕಾರಿಯೂ ಆಗಿದೆ. ನವೋದಯ ಕಾಲಘಟ್ಟದಿಂದ ತೊಡಗಿದಂತೆ ಕಡೆಂಗೋಡ್ಲು, ಮಾಸ್ತಿ, ಕುವೆಂಪು, ಎಕ್ಕುಂಡಿ, ಪು.ತಿ.ನ, ಕಂಬಾರ, ಅಡಿಗ, ಶರ್ಮ, ಅರವಿಂದ ಮಾಲಗತ್ತಿ, ಸಿದ್ಧಲಿಂಗಯ್ಯ, ಬರಗೂರು, ಎಚ್. ಎಸ್. ಶಿವಪ್ರಕಾಶ, ಮುಳ್ಳೂರು ನಾಗರಾಜ, ಕೆ.ಬಿ. ಸಿದ್ಧಯ್ಯ, ಬಂಜಕೆರೆ ಜಯಪ್ರಕಾಶ ಇವರೆಲ್ಲಾ ಬರೆದಿರುವ ಕಥನಕವನಗಳು ವಸ್ತು ರಚನಾ ಶೈಲಿಯಿಂದ ಭಿನ್ನ ಭಿನ್ನ ನೆಲೆಯಿಂದ ಮೂಡಿಬಂದವುಗಳಾಗಿವೆ. ಅಷ್ಟೇ ಅಲ್ಲದೆ ಕಥನಕವನಗಳು ತಮ್ಮ ವಸ್ತು ವೈವಿಧ್ಯತೆಗೆ ವಿಫುಲ ಅವಕಾಶ ಪಡೆದುಕೊಂಡಿದೆ. ಇಲ್ಲಿ ಈ ಎಲ್ಲಾ ಪರಂಪರೆಯು ಕಥನ ಕವನಗಳಲ್ಲಿ ಪುರಾಣವನ್ನು ಬಳಸಿದ, ಸ್ವೀಕರಿಸಿದ, ಪರಿಷ್ಕರಿಸಿದ, ತಿರಸ್ಕರಿಸಿದ ವಿವಿಧ ತಾತ್ತ್ವಿಕ ನೆಲೆಗಟ್ಟುಗಳನ್ನು ಅಧ್ಯಯನ ಮಾಡಿ ಅವುಗಳ ವೈಶಿಷ್ಟ್ಯವನ್ನು ಗುರುತಿಸಿರುವುದನ್ನು ಗುರಿಯಾಗಿ ಇರಿಸಿಕೊಳ್ಳಲಾಗಿದೆ. 'ಪುರಾಣ' ದ ಹಿನ್ನೆಲೆಯಲ್ಲಿ ವಿಭಿನ್ನ ನೆಲೆಯ ಕವಿಗಳನ್ನು ಒಂದೇ ಚೌಕಟ್ಟಿಗೆ ತಂದು, ಅವರ ಕಥನ ಕವನಗಳ ತಾತ್ತ್ವಿಕ ತುಡಿತಗಳನ್ನು ಅಭ್ಯಸಿಸುವುದು ಇಂದಿನ ಅಗತ್ಯವೂ ಆಗಿದೆ.

ಹೊಸಗನ್ನಡ ಕಥನ ಕವನಗಳ ಕುರಿತಂತೆ ವಿವಿಧ ನೆಲೆಯ, ಆಸಕ್ತಿಯ ಅಧ್ಯಯನಗಳು ನಡೆದಿದೆ. (ನಡೆದು ಬಂದ ದಾರಿ–೩(ಸಂ)–೩) ಇದರಲ್ಲಿ ಕಥನ ಕವನಗಳ ಕುರಿತ ಸಮೀಕ್ಷೆ ದೊರೆಯುತ್ತದೆ. ಬಳಿಕ ಅನೇಕ ಕವಿ ಹಾಗೂ ಕಥನ ಕವಿತೆಗಳ ಕುರಿತ ಬಿಡಿ ಬಿಡಿಯಾದ ಅಧ್ಯಯನಗಳು ನಡೆದಿವೆ. ಪ್ರೊ. ಎಸ್. ಅನಂತನಾರಾಯಣ ಅವರು 'ಹೊಸಗನ್ನಡ ಸಾಹಿತ್ಯದ ಮೇಲೆ ಇಂಗ್ಲೀಷ್ ಗೀತೆಗಳ ಪ್ರಭಾವ' ಕೃತಿಯಲ್ಲಿ ಕಥನ ಕವನ ಕುರಿತಂತೆ ಒಂದು ಅಧ್ಯಾಯವನ್ನು ಮೀಸಲಾಗಿರಿಸಿದ್ದಾರೆ. ಬಳಿಕ ಕಥನ ಕವನ ಕುರಿತಾಗಿಯೇ ಬಂದ ಮಹತ್ತ್ವದ ಕೃತಿ ಡಾ. ಎಚ್.ಎಸ್. ವೆಂಕಟೇಶ ಮೂರ್ತಿಯವರ ಪ್ರೌಢ ಪ್ರಬಂಧ ಕೃತಿ 'ಕನ್ನಡದಲ್ಲಿ ಕಥನ ಕವನಗಳು' – ಇದರಲ್ಲಿ ನಿರೂಪಣ ಶೈಲಿಯ ಭಿನ್ನ ಭಿನ್ನ ಮಾದರಿಯ ಕಥನ ಕವನ ಮತ್ತು ಒಂಭತ್ತು ಪ್ರಕರಣಗಳಲ್ಲಿ ಕಥನ ಕವನಗಳ ಕಥೆ, ಭಾವ ಪ್ರಾಧಾನ್ಯತೆ, ಸಾಂಕೇತಿಕತೆಗಳಿಗೆ ಸಂಬಂಧಿಸಿದಂತೆ ಅಧ್ಯಯನ ನಡೆಸಲಾಗಿದೆ. ಡಾ. ಕೆ.ಎಲ್. ಗೋಪಾಲಕೃಷ್ಣಯ್ಯನವರ 'ಕನ್ನಡ ಸಾಹಿತ್ಯದಲ್ಲಿ ಪುರಾಣಪ್ರಜ್ಞೆ' ಯಲ್ಲಿ ನವೋದಯ, ನವ್ಯ ಕಾಲಘಟ್ಟದ ಕವಿಗಳ ಅನೇಕ ಕವಿತೆಗಳನ್ನು ವಿಶ್ಲೇಷಣೆ ಮಾಡಲಾಗಿದೆ. ಈ ನಿಟ್ಟಿನಲ್ಲಿ ಇತ್ತೀಚಿಗಿನ ಪ್ರಮುಖ ಕೃತಿಯೆಂದರೆ ಮಲ್ಲೇಪುರಂ ಜಿ. ವೆಂಕಟೇಶರ 'ಕನ್ನಡಿಯೊಳಗಿನ ನೋಟ'. ಈ ನಡುವೆ ಅನೇಕ ಕವಿಗಳ ಪೌರಾಣಿಕ ಕಥನ ಕವನಗಳ ಕುರಿತ ಬಿಡಿ ಲೇಖನಗಳು ಪ್ರಕಟಗೊಂಡಿವೆ. ಮಲ್ಲೇಪುರಂ ಜಿ. ವೆಂಕಟೇಶ ಅವರ 'ಪುರಾಣ ಮತ್ತು ಸಾಹಿತ್ಯ', ರಹಮತ್ ತರೀಕೆರೆಯವರ ಪ್ರತಿಸಂಸ್ಕೃತಿ, ಮರದೊಳಗಣ ಕಿಚ್ಚು ಮುಖ್ಯವಾದುದಾಗಿದೆ. ಕಂಬಾರರ ಕಾವ್ಯದ ಕುರಿತಂತೆ ಡಾ. ಕೆ.ಎಲ್. ಗೋಪಾಲಕೃಷ್ಣಯ್ಯ, ಡಾ. ಶಿವರೆಡ್ಡಿಯವರ ಲೇಖನಗಳು; ವಿನಾಯಕರ ಕವಿತೆಯ ಕುರಿತಂತೆ ವಿನಾಯಕ ವಾಙ್ಮಯ ಸಂಪುಟ; ಸಂಕ್ರಮಣ ಪತ್ರಿಕೆಯಲ್ಲಿನ 'ಕುವೆಂಪು ಸಾಹಿತ್ಯದಲ್ಲಿ ವಸಾಹತುಶಾಹಿ ಸ್ವರೂಪ, ಇನ್ನೂ ಮುಂತಾಗಿ ಪೌರಾಣಿಕ ಕಥನ ಕವನ ಕುರಿತಂತೆ ಬಹಳಷ್ಟು ಬಿಡಿ ಬಿಡಿಯಾಗಿ 'ಆಯ್ಕೆ ಮಾಡಿಕೊಂಡ' ಕಥನಕವನಕಷ್ಟೆ ಸೀಮಿತವಾದ ವಿಮರ್ಶ ರೂಪದ ಬರಹಗಳು ಬಂದಿವೆ. ಇವುಗಳನ್ನು ಅಧ್ಯಯನದಲ್ಲಿ ಗಮನಿಸಲಾಗಿದೆ. ಅಷ್ಟೆ ಅಲ್ಲದೆ ಈ ವಿಮರ್ಶಕರು ಕಂಡು ಕೊಂಡ ವಿಶಿಷ್ಟವೂ ವಿಭಿನ್ನವೂ ಆದ ಕವಿ ಕಥನ ವಿಶೇಷಗಳನ್ನು ಸಾಂದರ್ಭಿಕವಾಗಿ ಉಲ್ಲೇಖಿಸಲಾಗಿದೆ.

ಪುರಾಣ ವಸ್ತು ವಿಚಾರಗಳನ್ನೊಳಗೊಂಡಂತೆ ಎಲ್ಲಾ ತಲೆಮಾರಿನ ಕವಿಗಳನ್ನು, ಪೌರಾಣಿಕ ಕಥನ ಕವನಗಳನ್ನು ಒಂದೇ ಚೌಕಟ್ಟಿಗೆ ತಂದು ಅಧ್ಯಯನ ನಡೆಸಲಾಗಿಲ್ಲ. ಈ ಅಗತ್ಯವನ್ನು ಈ ಅಧ್ಯಯನ ತೋರಿಸಿಕೊಡುತ್ತದೆ. ನವೋದಯ ಕಾಲಘಟ್ಟದಿಂದ ತೊಡಗಿ ದಲಿತ–ಬಂಡಾಯ ತನಕದ ಕವಿಗಳು ಪುರಾಣಗಳನ್ನು ಕಂಡು ಸ್ವೀಕರಿಸಿದ ವಿಭಿನ್ನ ನಿಲುವುಗಳು, ಅವರ ಭಿನ್ನ ಭಿನ್ನ ತಾತ್ತ್ವಿಕ ನೆಲೆಗಟ್ಟುಗಳನ್ನು ಹಾಗೂ ನವೋದಯದ

ಪ್ರಮುಖ ಕವಿಗಳನ್ನು ಏಕ ನೆಲೆಯೊಳಗೆ, ನವ್ಯದ ಕವಿಗಳನ್ನು ಏಕ ಚೌಕಟ್ಟಿಗೆ ತಂದು ನಡೆಸಿದ ಅಧ್ಯಯನಗಳೂ ಇಲ್ಲ. ಬೇಂದ್ರೆ, ಮಾಸ್ತಿ, ಪುತಿನ, ಕುವೆಂಪು, ಎಕ್ಕುಂಡಿ – ಮೊದಲಾದವರ ಪೌರಾಣಿಕ ಕವಿತೆಗಳ ಭಿನ್ನ ಭಿನ್ನ ವಿಶ್ಲೇಷಣೆಗಳಾಗಿವೆ ಹೊರತು ಒಂದೇ ನೆಲೆಗಟ್ಟಿನಡಿಯ ಅಧ್ಯಯನಗಳಿಲ್ಲ. ಆದರೆ ಕುವೆಂಪುರವರ ಕಲ್ಕಿ, ರಾಸಲೀಲೆ, ರಕ್ತ ರಜನಿ, ಕೃಷ್ಣ ಶಕ್ತಿ; ಪು.ತಿ.ನವರ ಗೋಕುಲ ನಿರ್ಗಮನ, ಸು.ರಂ. ಎಕ್ಕುಂಡಿಯವರ ಗಜೇಂದ್ರ ಮೋಕ್ಷ, ಶ್ವೇತ ಕೇತು ದೇವರ್ಷಿ ಮೊದಲಾಗಿ ಅಡಿಗರ ಮೋಹನ ಮುರಳಿ, ಭೂಮಿ ಗೀತ, ಜಿ.ಎಸ್.ಎಸ್‌ರವರ ಭೀಮಾಲಾಪ, ಸಿದ್ಧಲಿಂಗಯ್ಯನವರ 'ಕತ್ತೆ ಮತ್ತು ಧರ್ಮ', ಬರಗೂರರ ಮಾದಿಗರ ಹುಡುಗಿ; ಎಚ್.ಎಸ್. ಶಿವಪ್ರಕಾಶರ ಸಮಗಾರ ಭೀಮವ್ವ; ಇನ್ನಿತರ ಅನೇಕ ಕವಿತೆಗಳನ್ನು ಕುರಿತ ಬಿಡಿ ಬಿಡಿಯಾದ ವಿಮರ್ಶೆಗಳು ಮೂಡಿ ಬಂದಿವೆ.

ಎಲ್ಲಾ ಕಾಲದ ಕವಿಗಳನ್ನು ಭಿನ್ನ ಭಿನ್ನ ಕಾರಣಗಳಿಗಾಗಿ ಪುರಾಣವು ತನ್ನೆಡೆಗೆ ಸೆಳೆದುಕೊಂಡಿದೆ. ಪುರಾಣಗಳನ್ನು ಬಳಸಿಕೊಂಡು ತಮ್ಮ ಕಾಲ ಘಟ್ಟದಲ್ಲಿ ಮೂಡಿ ಬಂದ ಸಾಹಿತ್ಯ ಚಳುವಳಿಗನುಗುಣವಾಗಿ ಸಂಬಂಧಿತ ಆಶಯಗಳ ಅಭಿವ್ಯಕ್ತಿಯನ್ನು ಸಮರ್ಥನೀಯವಾಗಿ ಕವಿಗಳು ಮಾಡಿದ್ದಾರೆ. 'ಲೋಕೋಭಿನ್ನರುಚಿಃ'ಗೆ ಅನುಗುಣವಾಗಿ ಪುರಾಣದ ಕಡೆಗೆ ಇವರ ದೃಷ್ಟಿ, ಅಲ್ಲಿನ ಪಾತ್ರ, ಮೌಲ್ಯಗಳನ್ನು ದುಡಿಸಿಕೊಂಡ ಬಗೆಯು ಆಸಕ್ತಿದಾಯಕವಾದುದೇ ಆಗಿದೆ. ನವೋದಯ ಕಾಲಘಟ್ಟದಲ್ಲೂ ಭಿನ್ನರಾಗಿ ನಿಲ್ಲುವ ಕುವೆಂಪು, ನವ್ಯದವರಲ್ಲೂ ಭಿನ್ನವಾಗಿ ಕಾಣುವ ಕಂಬಾರರು ಒಂದೆಡೆಯಾದರೆ ಪುರಾಣವನ್ನು ಬಳಸಿಯೂ ಅದರೆಡೆಗೆ ಪರಂಪರೆಗಿಂತ ಭಿನ್ನವಾದ ಚಿಕಿತ್ಸಕ ದೃಷ್ಟಿ ಬೀರುವ ದಲಿತ ಬಂಡಾಯದ ಕವಿಗಳ ಕಥನ ಕವಿತೆಗಳ ಅಧ್ಯಯನ ಕುತೂಹಲಕಾರಿ. ಜತೆಗೆ ಸಮುದಾಯ ಪುರಾಣಗಳನ್ನು ಪರಂಪರೆಯ ಪುರಾಣಗಳ ಮೌಲ್ಯಗಳ ಮುಖಾಮುಖಿಗಾಗಿಯೇ ರಚಿಸಿದ ಕಥನ ಕವನಗಳ ಓದು ಅಧ್ಯಯನ ಅಗತ್ಯವೂ ಆಗಿದೆ. ಈ ಬಗೆಯ ಅಧ್ಯಯನ ಪೂರ್ಣವಾಗಿ ನಡೆದಿಲ್ಲ. ಈ ಬಗೆಯ ವಿಮರ್ಶೆಗಳು ಬಂದೇ ಇಲ್ಲವೆಂದಲ್ಲ, ಈ ಬಗೆಯ ಬಿಡಿ ಓದು, ಲೇಖನಗಳು ಅಸಂಖ್ಯ. ಅವುಗಳನ್ನು ಇಲ್ಲಿ ಪಟ್ಟಿ ಮಾಡುವ ಕೆಲಸ ಅನಗತ್ಯ. ಅವುಗಳನ್ನು ಇಲ್ಲಿನ ಅಧ್ಯಯನದ ಅನುಸಾರವಾಗಿ ಪುರಾಣ ಸಂಬಂಧಿ ವಿಚಾರಗಳನ್ನು ಚರ್ಚಿಸಲಾಗಿದೆ. ಜತೆಗೆ ಸಾಹಿತ್ಯ ಸಮಾಜಮುಖಿ ಎಂಬ ನಂಬಿಕೆಯಿಂದ ಪುರಾಣಗಳನ್ನು ಪರಂಪರೆಯ ವ್ಯವಸ್ಥೆ ಬಳಸಿಕೊಂಡು ಬಂದ ಸ್ಪಷ್ಟ ನಿಲುವುಗಳ ಚಿಂತನೆಗಳಿವೆ. ಇವು ಸಾಹಿತ್ಯ ಸಾಗಿ ಬಂದ ಒಳಗಿನ ಸತ್ಯವನ್ನು ತೆರೆದು ತೋರುತ್ತದೆ. ಪುರಾಣವನ್ನು ಸಾಹಿತ್ಯ ಪ್ರಕಾರಗಳಲ್ಲಿ ಬಳಸಿಕೊಳ್ಳುವುದರ ಜೊತೆಗೆ ಸಮಾಜದಲ್ಲಿ ಅಂತರ್ಗತವಾಗಿ ಪುರಾಣವು ಪರ್ಯಾಯವಾಗಿ ಬಳಕೆಯಾದ ದಾರಿಯನ್ನು ಇದು ತೋರುತ್ತದೆ.

ವ್ಯವಸ್ಥೆಯನ್ನು ಹಿಡಿತದಲ್ಲಿಟ್ಟುಕೊಳ್ಳುವಲ್ಲಿ ಪ್ರಭುತ್ವವು ಪುರಾಣವನ್ನು ಸಾಧನವಾಗಿ ಬಳಸಿಕೊಂಡ ಬಗೆ ಒಂದೆಡೆಯಾದರೆ ಸಾಂಸ್ಕೃತಿಕ ಬದುಕಿನ, ಧಾರ್ಮಿಕ ಬದುಕಿನ, ಚರಿತ್ರೆಯಾಗಿ ಪುರಾಣದ ಹೆಜ್ಜೆ ಗುರುತುಗಳು ತೆರೆದುಕೊಳ್ಳುತ್ತದೆ. ಪ್ರಭುತ್ವ ಮತ್ತು ಚರಿತ್ರೆಯ ಜೊತೆ ಪುರಾಣ ಮತ್ತು ಆಧುನಿಕ ಸಾಹಿತ್ಯದ ಸಂಬಂಧಗಳನ್ನು ವಿಶ್ಲೇಷಿಸಲಾಗಿದೆ.

ಹೊಸಗನ್ನಡ ಸಾಹಿತ್ಯ ಚಳುವಳಿಗಳ ನೆಲೆಯೊಳಗೆ ನವೋದಯ, ಸಮನ್ವಯ, ನವ್ಯ, ದಲಿತ–ಬಂಡಾಯದ ಕವಿಗಳು ಪುರಾಣವನ್ನು ಸ್ವೀಕರಿಸಿದ ವಿಭಿನ್ನ ನೆಲೆಗಳನ್ನು ಅವುಗಳ ಕಾರಣಗಳನ್ನು ಗುರುತಿಸುವುದು ಎರಡನೆಯ ಹಂತವಾಗಿದೆ. ವಸಾಹತುಶಾಹಿಯ ಬಗ್ಗೆ ಉಂಟಾದ ಸ್ವಾಗತ–ಸಂಘರ್ಷದ ಮನೋಧರ್ಮವೇ ಪುರಾಣದ ವಿಚಾರ ಮತ್ತು ಮೌಲ್ಯಗಳ ಸ್ವೀಕಾರಾರ್ಹ ಮನೋವೃತ್ತಿ ಮತ್ತು ಪರಿಷ್ಕಾರ ದೃಷ್ಟಿಗೆ ಕಾರಣವಾಗಿದೆ. ಸಮುದಾಯ ಪುರಾಣಗಳಿಗಾಗಿ ತೆರೆದುಕೊಂಡ ಮನಸ್ಸುಗಳು ಪರಂಪರೆಯ ಪುರಾಣಗಳ ಮೌಲ್ಯಗಳನ್ನು ತಿರಸ್ಕರಿಸುವಲ್ಲಿ ಕೆಲಸ ಮಾಡುವ ಧೋರಣೆಗಳು ಇಲ್ಲಿ ಮುಖ್ಯವಾಗಿದೆ. ಈ ಮುಖೇನ ಕಥನ ಕವನಗಳಲ್ಲಿ ಕವಿಗಳ ವಿಶಿಷ್ಟ ಹೆಜ್ಜೆ ಗುರುತುಗಳನ್ನು ಕಾಣಲಾಗಿದೆ. ಕಥನ ಕವಿತೆಗಳ ಮತ್ತು ಕವಿಗಳ ಆಯ್ಕೆಯಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಅಧ್ಯಯನದ ಆಶಯಕ್ಕೆ ಅನುಗುಣವಾಗುವ ಆಯ್ಕೆ ಮಾಡಲಾಗಿದೆ ಮತ್ತು ಕವಿಗಳ ದೃಷ್ಟಿಯಿಂದ ಸಮರ್ಥನೀಯವಾಗಿರುವಂತೆ ಪ್ರಯತ್ನಪಡಲಾಗಿದೆ. ಕಥನ ಕವನಗಳಲ್ಲಿ ಪುರಾಣದ ತಾತ್ತ್ವಿಕ ಮೌಲ್ಯಗಳ ಸ್ಪಷ್ಟತೆಗಾಗಿ, ವಿಶ್ಲೇಷಣೆ, ಕವನ ಉಲ್ಲೇಖಗಳು ಸವಿವರವಾಗಿ ಮೂಡಿ ಬಂದಿದೆ. ಪ್ರತಿ ಅಧ್ಯಾಯದಲ್ಲೂ ಪುರಾಣದ ವಿಶಿಷ್ಟ ಹೆಜ್ಜೆ ಗುರುತುಗಳನ್ನು ತೋರಿಸುವ ಉದ್ದೇಶ ಇರಿಸಿಕೊಳ್ಳಲಾಗಿದೆ.

ಕಾಲಘಟ್ಟ ಅಥವಾ ಚಳುವಳಿಯ ನೆಲೆಯೊಳಗೆ ಪೌರಾಣಿಕ ಕಥನ ಕವನಗಳನ್ನು ವಿವರಿಸಿ ಕಥನ ಕವನಗಳ ಪ್ರತಿಪಾದಿಸುವ ಮೌಲ್ಯಗಳನ್ನು ನಾಲ್ಕನೆಯ ಅಧ್ಯಾಯದಲ್ಲಿ ಪ್ರಮುಖವಾಗಿ ಮಾಡಲಾಗಿದೆ. ಕಥನ ಕವನಗಳ ಹಿಂದಿರುವ ಕಾಲಘಟ್ಟದ ಮತ್ತು ಕವಿಯ ಮನೋಧರ್ಮವನ್ನು ಆಶಯವನ್ನು ಗುರುತಿಸಲಾಗಿದೆ. ವಿಭಿನ್ನವಾಗಿ ಗುರುತಿಸಲಾದ ಕಾಲದ ನೆಲೆಯೊಳಗಿನ ಪೌರಾಣಿಕ ಕಥನ ಕವನಗಳ ವಿಶ್ಲೇಷಣೆ ಬಳಿಕ ವಿಮರ್ಶೆಯ ಮಾತುಗಳನ್ನು ಆಯಾ ಹಂತದ ಒಟ್ಟು ಕವಿತೆಗಳ ನೆಲೆಯಿಂದ ಹೇಳಲಾಗಿದೆ. ಪ್ರತಿಹಂತದ ಕಥನ ಕವನಗಳ ವಿಶ್ಲೇಷಣೆಯ ಬಳಿಕ ಒಟ್ಟಾಗಿ ವಿಚಾರಗಳನ್ನು ಸಂಗ್ರಹಿಸಿ ವಿವರಿಸಲಾಗಿದೆ. ಒಬ್ಬನೇ ಕವಿಯ ಪೌರಾಣಿಕ ಕಥನ ಕವನಗಳನ್ನು ವಿಶ್ಲೇಷಣೆಗೆ ಒಳಪಡಿಸಿದಾಗ ಸಂದರ್ಭಕ್ಕನುಗುಣವಾಗಿ ಇತರ ಪುರಾಣ ಸಂಬಂಧಿ ಕಥನ ಕವನಗಳನ್ನು ಉಲ್ಲೇಖಿಸಲಾಗಿದೆ. ಇಲ್ಲಿ ಮೊದಲ ಹಂತದ ಕವಿಗಳಾಗಿ ಕಡೆಂಗೋಡ್ಲು ಶಂಕರ ಭಟ್, ಮಾಸ್ತಿ,

ಬೇಂದ್ರೆ, ಕುವೆಂಪು ಮೊದಲಾದ ಕವಿಗಳನ್ನು ನೋಡಲಾಗಿದೆ. ಎರಡನೆಯ ನೆಲೆಯೊಳಗೆ ಸಮನ್ವಯದ ಕವಿಗಳಾಗಿ ಎಕ್ಕುಂಡಿ, ವಿನಾಯಕ, ಎಚ್. ಎಸ್. ವೆಂಕಟೇಶಮೂರ್ತಿ, ಕಂಬಾರ, ಜಿ.ಎಸ್. ಎಸ್., ಕಣವಿಯವರನ್ನು; ನವ್ಯದ ಹಂತದೊಳಗೆ ಪ್ರಮುಖವಾಗಿ ಅಡಿಗ, ಶರ್ಮ, ತಿರುಮಲೇಶ, ರಾಮಾನುಜನ್ ಮೊದಲಾದ ಕವಿತೆಗಳನ್ನು ಆಯ್ಕೆ ಮಾಡಲಾಗಿದೆ. ಕೊನೆಯ ಹಂತದ ದಲಿತ ಬಂಡಾಯದ ನೆಲೆಯೊಳಗೆ ಬರಗೂರು, ಸಿದ್ಧಲಿಂಗಯ್ಯ, ಕಾಳೆಗೌಡ ನಾಗವಾರ, ಅರವಿಂದ ಮಾಲಗತ್ತಿ, ಎಸ್. ಜಿ. ಸಿದ್ಧರಾಮಯ್ಯ, ಕೇಶವ ಶರ್ಮ, ಎಚ್.ಎಸ್. ಶಿವಪ್ರಕಾಶ, ಬಿ. ರಾಜಣ್ಣ, ಬಂಜಗೆರೆ ಜಯಪ್ರಕಾಶ, ಕೆ. ಬಿ. ಸಿದ್ಧಯ್ಯ. ಮುಳ್ಳೂರು ನಾಗರಾಜ. ಮಾಧವಿ ಭಂಡಾರಿ, ಮಾರುತಿ ಸುಕನ್ಯಾ, ಧರಣಿ ಮಾಲಗತ್ತಿ ಮೊದಲಾದ ಹೊಸ ನೆಲೆಯ ಕವಿಗಳನ್ನು ಈ ವ್ಯಾಪ್ತಿಗೆ ತರಲಾಗಿದೆ.

ಈ ಅಧ್ಯಯನದಲ್ಲಿ ಆಧುನಿಕ ಕನ್ನಡ ಕಥನ ಕವನಗಳಲ್ಲಿ ಅಭಿವ್ಯಕ್ತಗೊಂಡಿರುವ ಪುರಾಣಗಳ ಸ್ವರೂಪವನ್ನು ಅಧ್ಯಯನ ನಡೆಸಲಾಗಿದೆ. ಪರಿಕಲ್ಪನಾತ್ಮಕ ಅಧ್ಯಯನ ಕ್ರಮವನ್ನು ಗಮನದಲ್ಲಿರಿಸಿಕೊಂಡು ಅಧ್ಯಯನ ನಡೆಸಿರುವುದರಿಂದ ಆಧುನಿಕ ಕನ್ನಡ ಕಥನ ಕವನಗಳ ಮತ್ತು ಪೌರಾಣಿಕ ಕಥನ ಕವನಗಳ ಒಂದು ಸ್ಥೂಲ ನೋಟವನ್ನು ಮಾತ್ರ ಒದಗಿಸಲಾಗಿದೆ. ಆಧುನಿಕ ಕನ್ನಡ ಕಥನ ಕವನಗಳು ಪೌರಾಣಿಕ ಕಥನ ಕವನಗಳಲ್ಲಿ ವ್ಯಕ್ತ ಪಡಿಸಿರುವ ಆಶಯಗಳನ್ನು ಆಧುನಿಕ ಚರಿತ್ರೆಯ ಹಿನ್ನೆಲೆಯಿಂದ ಪರಿಭಾವಿಸಲಾಗಿದೆ. ವಸಾಹತುಶಾಹಿಯ ಅನುಭವ ಮತ್ತು ಅದರ ಪ್ರಭಾವಗಳು ಕನ್ನಡದ ಪೌರಾಣಿಕ ಕಥನಕವನಗಳ ಮೇಲೆ ಹೇಗೆ ಪ್ರಭಾವ ಬೀರಿದೆ ಎಂಬುದನ್ನು ತಾತ್ವಿಕವಾಗಿ ಚರ್ಚಿಸಲಾಗಿದೆ. ಹಾಗೆಯೇ ಪೌರಾಣಿಕ ಕಥನ ಕವನಗಳ ಆಯ್ಕೆಯ ಸಂದರ್ಭದಲ್ಲಿ ಪ್ರಭಾವಶಾಲಿಯಾಗಿರುವ ವೈಚಾರಿಕ ಆಕೃತಿಗಳನ್ನು ಗ್ರಹಿಸಲಾಗಿದೆ. ಆಧುನಿಕ ಕನ್ನಡ ಕಥನಕವನಗಳಲ್ಲಿ ಪುರಾಣ ಸ್ವರೂಪವು ಬೆಳೆದು ಬಂದ ಬಗೆಯನ್ನು ಪ್ರಾತಿನಿಧಿಕವಾಗಿ ನೋಡಲಾಗಿದೆ ಮತ್ತು ಎಲ್ಲಾ ಕವನಗಳನ್ನು ವಿಶ್ಲೇಷಿಸುವುದು ಅಧ್ಯಯನ ಕ್ರಮದ ದೃಷ್ಟಿಯಿಂದ ಸಾಧ್ಯವಾಗಿಲ್ಲ. ವಿವರಣಾತ್ಮಕ ಅಧ್ಯಯನ ಕ್ರಮದಲ್ಲಿ ಪೌರಾಣಿಕ ಕಥನ ಕವನಗಳನ್ನು ಚರ್ಚಿಸುವುದು ಬೇರೊಂದು ಅಧ್ಯಯನವನ್ನೇ ನಿರೀಕ್ಷಿಸುತ್ತದೆ.

ಆಧುನಿಕ ಕನ್ನಡ ಪೌರಾಣಿಕ ಕನ್ನಡ ಕಥನ ಕವನಗಳ ವಿಭಿನ್ನ ರೀತಿಯ ಪ್ರತಿಕ್ರಿಯೆಗಳನ್ನು ಈ ಅಧ್ಯಯನದಲ್ಲಿ ಪರಿಶೀಲಿಸಲಾಗಿದೆ. ಪೌರಾಣಿಕ ಕಥನ ಕವನಗಳ ಹಿಂದಿರುವ ದೇಶೀಯ ಪರಿಕಲ್ಪನೆ ಅದರ ವೈಚಾರಿಕ ಆಕೃತಿಗಳು ಒಂದಾದರೆ, ಪೌರಾಣಿಕ ಕಥನ ಕವನವನ್ನು ಪ್ರಗತಿ ಪರ ದೃಷ್ಟಿ ಕೋನದಿಂದ ಜನಪರ ಕಾಳಜಿಯಿಂದ ಸಮಾಜವಾದಿ ಹಿನ್ನೆಲೆಯಿಂದ ನಿರೂಪಿಸುವಾಗ ಬೇರೆ ಮಾದರಿಯಾಗುತ್ತದೆ. ಈ ಅಂಶವನ್ನು

ಪ್ರಧಾನವಾಗಿ ಗಮನಕ್ಕೆ ತಂದುಕೊಳ್ಳಲಾಗಿದೆ. ಕನ್ನಡದ ನವ್ಯ ಲೇಖಕರು ಹಾಗೂ ಆಧುನಿಕವಾಗಿ ಕವಿಗಳು ಪೌರಾಣಿಕ ಸಂಗತಿಗಳನ್ನು ವ್ಯಕ್ತಿ ಕೇಂದ್ರಿತ ಹಾಗೂ ಆಧುನಿಕ ಚಿಂತನೆಗಳ ಹಿನ್ನೆಲೆಯಿಂದ ಪ್ರತಿಮಾತ್ಮಕವಾಗಿ ನಿರೂಪಿಸಿರುವುದನ್ನು ಈ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

ಪೌರಾಣಿಕ ಕಥನ ಕವನಗಳಲ್ಲಿ ಬುಡಕಟ್ಟು ಪುರಾಣಗಳು, ಅವೈದಿಕ ಎನ್ನಬಹುದಾದ ಪೌರಾಣಿಕ ಚಿಂತನೆಗಳು ಅಭಿವ್ಯಕ್ತಗೊಂಡಿರುವುದನ್ನು ಈ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

ಪೌರಾಣಿಕ ಕಥನ ಕವನಗಳ ರಾಚನಿಕ ಕ್ರಮವನ್ನು ಈ ಅಧ್ಯಯನದ ಕೊನೆಯಲ್ಲಿ ಪ್ರಾತಿನಿಧಿಕವಾಗಿ ಚರ್ಚಿಸಲಾಗಿದೆ. ರಾಚನಿಕ ಅಧ್ಯಯನವೇ ಒಂದು ಪ್ರತ್ಯೇಕವಾದ ಅಧ್ಯಯನ ಕ್ರಮವಾಗಿರುವುದರಿಂದ ಆ ಮಾದರಿಯ ಅಧ್ಯಯನಕ್ಕೆ ಈ ಅಧ್ಯಯನದಲ್ಲಿ ಕೆಲವು ಸೂಚನೆಗಳನ್ನು ಮಾತ್ರವೇ ನೀಡಲು ಸಾಧ್ಯವಾಗಿದೆ. ಪ್ರಾತಿನಿಧಿಕವಾಗಿ ಮೂರು ಕವಿತೆಗಳನ್ನು ಆಯ್ಕೆ ಮಾಡಿಕೊಂಡು ಅವುಗಳ ರಾಚನಿಕ ವಿನ್ಯಾಸವನ್ನು ಚರ್ಚಿಸಲಾಗಿದೆ. ಈ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಕೃತಿಗಳ ಹೊರತಾಗಿಯೂ, ಬೇರೆ ಪೌರಾಣಿಕ ಕಥನ ಕವನಗಳು ಇರಬಹುದಾದರೂ ಪೌರಾಣಿಕ ಕಥನ ಕವನಗಳ ಬಿಡಿ ಬಿಡಿಯಾದ ಮೌಲ್ಯ ವಿವೇಚನೆಯನ್ನು ಮಾಡಿಲ್ಲ.

ಆಧುನಿಕ ಕನ್ನಡ ಕಾವ್ಯದಲ್ಲಿ ಪೌರಾಣಿಕ ಕಥನ ಕವನಗಳದ್ದೇ ಒಂದು ಪ್ರತ್ಯೇಕವಾದ ಕಾವ್ಯ ಮಾರ್ಗವಾಗಿ ಇಲ್ಲಿ ಚರ್ಚಿಸಲಾಗಿದೆ. ಇವುಗಳನ್ನು ತೌಲನಿಕವಾಗಿಯೂ ಅಧ್ಯಯನ ನಡೆಸಲು ಅವಕಾಶವಿದೆ. ಒಟ್ಟಿನಲ್ಲಿ ಪೌರಾಣಿಕ ಕಥನ ಕವನಗಳನ್ನು ಕೇಂದ್ರವಾಗಿರಿಸಿಕೊಂಡ ಈ ಅಧ್ಯಯನದಲ್ಲಿ ಕಥನ ಕವನಗಳ ಬಗೆಗಿನ ಒಂದು ಪ್ರವೇಶ ಮಾತ್ರವೇ ಇದೆ.